ಜನಿಸಿದ ಐವರು ಮಕ್ಕಳ ಪೈಕಿ 1931ರಲ್ಲಿ ಜನಿಸಿದ ಪರಮಶಿವನ್ ಮಧ್ಯದವರು. 'ಸ್ತ್ರೀ ನಾಟಕ ಮಂಡಳಿ'ಯ ಅಕ್ಕ ಆರ್. ನಾಗರತ್ನಮ್ಮ ಮತ್ತು ತಂಗಿ ಆರ್. ಮಂಜುಳ ಅವರೂ ವೃತ್ತಿರಂಗಭೂಮಿಯ ಹೆಸರಾಂತ ನಟಿಯರಾಗಿ ಮುಂದೆ ಹೆಸರು ಮಾಡಿದ್ದು ಇತಿಹಾಸ. ನಾಲ್ಕು ವರ್ಷದ ಬಾಲಕನಿಗೆ ಯಾರೋ ನಾಟಕ ಕಂಪನಿ ದಾರಿ ತೋರಿದರು. ಬೆಂಗಳೂರಿನ ಗುಬ್ಬಿವೀರಣ್ಣನವರ ಶಿವಾನಂದ ಥಿಯೇಟರ್‌ನಲ್ಲಿ ಚಾಮುಂಡೇಶ್ವರಿ ಕಂಪನಿಯ 'ವಸಂತಸೇನೆ' ನಾಟಕದಲ್ಲಿ ಕೊಟ್ಟೂರಪ್ಪನಂತಹ ದಿಗ್ಗಜ ನಟನ ಚಾರುದತ್ತನ ಪಾತ್ರಕ್ಕೆ ಮಗ ರೋಹಸೇನನಾಗಿ ಬಣ್ಣ ಹಚ್ಚುವ ಅವಕಾಶ ಲಭಿಸಿತು. 'ದಾನಶೂರ ಕರ್ಣ'ದಲ್ಲಿ ಕರ್ಣನ ಮಗ ವೃಷಕೇತು, 'ರಾಜಸೂಯಯಾಗ'ದಲ್ಲಿ ಜರಾಸಂಧನ ಮಗ ಸಹದೇವ, 'ತುಕಾರಾಮ'ನ ಮಗ ಮಹಾದೇವ, ಭಕ್ತ ಪ್ರಹ್ಲಾದ, ಹೀಗೆ ಎಳೆಯ ವಯಸ್ಸಿನಲ್ಲೇ ದೊರೆತ ಬಾಲಪಾತ್ರಗಳು ಅಪರಿಮಿತ ವಿಶ್ವಾಸ ಮೂಡಿಸಿಬಿಟ್ಟವು. ಮಧುರಕಂಠ ದೈವದತ್ತವಾಗಿ ಬಂದಿತ್ತು. ಬಾಲಕನ ಶಾರೀರ ಸಂಪತ್ತನ್ನು ಗಮನಿಸಿದ ಹಾರ್ಮೋನಿಯಂ ಮಾಸ್ಟರ್ ಎಂ. ಶಿವಪ್ಪನವರು 12 ವರ್ಣ (2 ಕಾಲಗಳಲ್ಲಿ) 20 ಕೀರ್ತನೆಗಳವರೆಗೆ ಉಚಿತವಾಗಿ ಕಲಿಸಿಕೊಟ್ಟರು. ಇದು ಸಂಗೀತದ ಮೊದಲ ಪಾಠ.

ಮಳವಳ್ಳಿ ಸುಂದರಮ್ಮ ಎಂಬ ಅಪ್ರತಿಮ ಹಾಡುನಟಿ ಮರಿರಾವ್ ಕಂಪನಿಯಲ್ಲಿದ್ದರು. ಈಶ ಮನೋಹರಿ ರಾಗದ ಕೀರ್ತನೆಯನ್ನು ಹಾಗೂ ವಿವರ್ಧಿನಿ ಎಂಬ ರಾಗದ ಒಟ್ಟು ಎರಡು ಕೀರ್ತನೆಗಳನ್ನು ಸ್ವತಃ ಸುಂದರಮ್ಮನವರೇ ಹೇಳಿಕೊಟ್ಟು ಹರಿಸಿದರು. ಅದರ ಫಲವಾಗಿ ಗುಬ್ಬಿವೀರಣ್ಣನವರು 1940ರಲ್ಲಿ ನಿರ್ಮಿಸಿದ 'ಸುಭದ್ರ' ಚಿತ್ರದಲ್ಲಿ ಸಂಗೀತ ನಿರ್ದೇಶಕ ಪದ್ಮನಾಭಶಾಸ್ತ್ರಿಗಳಿಗೆ ಸಹಾಯಕನಾಗಿ, ಅವರ ರಾಗಸಂಯೋಜನೆಗೆ ಸ್ವರಗಳನ್ನು ಹೇಳುವ ಅವಕಾಶ ಹದಿಹರೆಯದ ಪರಮಶಿವನ್‌ಗೆ ಲಭಿಸಿತು. ಚಿತ್ರನಿರ್ಮಾಣದ ನಂತರ ಪುಣೆಯಿಂದ ಮತ್ತೆ ನಾಟಕ ಕಂಪನಿಗೇ ಮರಳಿದರು.

ಕೆ. ಹಿರಣ್ಣಯ್ಯ ಮಿತ್ರಮಂಡಳಿಯಲ್ಲಿ 1941–42ರಲ್ಲಿ ದೊರೆತ ಅವಕಾಶಗಳು ನಟನೆಯ ಪಾಠ ಹೇಳಿಕೊಟ್ಟವು. 1943ರಲ್ಲಿ ಮರಳಿ 'ಚಾಮುಂಡೇಶ್ವರಿ ಕಂಪನಿ'ಗೆ ಬಂದರೆ, ಗಾಯನಕ್ಕೆ ಪ್ರಾಧಾನ್ಯ ಇರುವ ಆಂಜನೇಯ, ಗಯ, ನಾರದ ಮುಂತಾದ ದೊಡ್ಡ ಪಾತ್ರಗಳೇ ಲಭಿಸಿದವು. ಬೇಹಾಗ್ ರಾಗದಲ್ಲಿ 'ಜನಕಂ ಅದೆಲ್ಲಿರ್ದಪನೋ...' ಕಂದದ ಹಾಡುಗಾರಿಕೆಗೆ ಮೈಸೂರು ಆಸ್ಥಾನ ವಿದ್ವಾನ್ ಬಿ. ದೇವೇಂದ್ರಪ್ಪನವರು ಮೆಚ್ಚಿಕೊಂಡರು. ಈ ಹುಡುಗನಿಗೆ ಸಂಗೀತ ಹೇಳಿಕೊಟ್ಟರೆ ಸಾರ್ಥಕ ಎಂದು ಭಾವಿಸಿದ ಅವರು, ವಿದ್ವತ್ ಪರೀಕ್ಷೆಗೆ ಅಗತ್ಯವಾದ ಸಂಗೀತಪಾಠ ಮಾಡಿದರು. ವೀಣೆ, ಪಿಟೀಲು, ಜಲತರಂಗ್ ಕಲಿಸಿಕೊಟ್ಟರು. ಇದರಿಂದಾಗಿ ಮದ್ರಾಸ್ ಆಕಾಶವಾಣಿಯ ಸಂಗೀತ ಕಾರ್ಯಕ್ರಮಕ್ಕೆ ಆಗಾಗ ಹೋಗುವ ಅವಕಾಶ ಪರಮಶಿವನ್‌ಗೆ ಲಭಿಸಿತು. 'ಕನ್ನಡದ ಕೋಗಿಲೆ' ಎಂದು ಖ್ಯಾತರಾದ ಪಿ. ಕಾಳಿಂಗರಾವ್ ಹಾಗೂ ಸಿ.ವಿ. ರಾಜು ಅವರಿಗೆ ಸಹಾಯಕನಾಗುವ ಯೋಗ ಒದಗಿಬಂದಿತು. ರಂಗಗಾಯನ ದಿಗ್ಗಜರಾದ ನಾಗೇಶರಾಯ, ಗಂಗಾಧರರಾಯ, ಮಳವಳ್ಳಿ ಸುಂದರಮ್ಮ, ಕೊಟ್ಟೂರಪ್ಪ, ಮುರಾರಾಚಾರ್, ಬಿ. ಜಯಮ್ಮ ಮುಂತಾದವರಿಗೆ 15ನೇ ವಯಸ್ಸಿಗೆ ಹಾರ್ಮೋನಿಯಂ ನುಡಿಸಿದ ಸೌಭಾಗ್ಯ ಪರಮಶಿವನ್ ಅವರದಾಗಿತ್ತು. ನಂತರ 1950ರಲ್ಲಿ ಸುಬ್ಬಯ್ಯನಾಯ್ಡು ಅವರ 'ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ'ಯಲ್ಲಿ ಹಾರ್ಮೋನಿಯಂ ವಾದಕ, ಸಂಗೀತ ನಿರ್ದೇಶಕನಾಗಿ ಪ್ರತಿಷ್ಠಾಪಿತರಾದರು.

ಮುತ್ತುರಾಜು (ವರನಟ ರಾಜಕುಮಾರ್) ಅವರು ನಾಯ್ಡು ಕಂಪನಿಯಲ್ಲಿ ಸಹನಟನಾಗಿ ಜೊತೆಯಾದರು. ನಾಲ್ಕು ವರ್ಷದ ಕಾಲ ಅವರದು ಅನ್ಯೋನ್ಯ ಬಾಂಧವ್ಯ. ಮುತ್ತುರಾಜರ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಹೆಸರಾಂತ



ನಟರು. ಮಕ್ಕಳಾದ ಮುತ್ತುರಾಜ, ವರದರಾಜ, ಶಾರದಾ ಜತೆಗೆ ಪರಮಶಿವನ್ ಅವರನ್ನು ಕರೆದುಕೊಂಡು ಹಂಚಿಕೊಂಡು ತಿನ್ನುತ್ತಿದ್ದರು. ಆಂಜನೇಯನ ಪಾತ್ರದ ಎಲ್ಲ ಹಾಡುಗಾರಿಕೆಯನ್ನು ಮುತ್ತುರಾಜು ಅವರಿಗೆ ಪರಮಶಿವನ್ ಕಲಿಸಿಕೊಟ್ಟರು.

ಈ ಮಧ್ಯೆ ಮಾಸ್ಟರ್ ಹಿರಣ್ಣಯ್ಯ, ಮುಸುರಿ ಕೃಷ್ಣಮೂರ್ತಿಯವರೊಂದಿಗೆ ಬಳ್ಳಾರಿ ಲಲಿತಮ್ಮನವರ ನಾಟಕ ಕಂಪನಿ ಸೇರಿದರು. ಪರಮಶಿವನ್ 1960ರಲ್ಲಿ ಗುಬ್ಬಿ ಕಂಪನಿ ಸೇರಿದರು. ಅಲ್ಲಿ ವೀಣೆ, ಪಿಟೀಲು ವಾದ್ಯ ನುಡಿಸುವಿಕೆಯಲ್ಲಿ ಹೆಚ್ಚಿನ ರಿಯಾಜ್ ಮಾಡಿ ಸೀನಿಯರ್ ಪರೀಕ್ಷೆ ಪಾಸಾದರು.

ಅಕ್ಕ ಆರ್.ನಾಗರತ್ನಮ್ಮ ಸ್ತ್ರೀ ನಾಟಕ ಮಂಡಳಿ ಸ್ಥಾಪಿಸಿದ್ದರು. ತಮ್ಮನನ್ನು ಆಹ್ವಾನಿಸಿದರು. ಹೊಸ ನಾಟಕಗಳನ್ನು ಪ್ರಯೋಗಕ್ಕೆ ಎತ್ತಿಕೊಳ್ಳಬೇಕೆಂದರೆ ಹಾಡು ಕಲಿಸಿಕೊಡುವವರು ಇರಲಿಲ್ಲ. ಯಾಕೆಂದರೆ ಸಂಭಾಷಣೆಗೆ ಸಮವಾಗಿ ಹಾಡು ಪ್ರಧಾನವಾಗಿದ್ದ ಕಾಲ ಅದು. ಪರಮಶಿವನ್ ಪ್ರವೇಶದ ನಂತರ 'ಕೃಷ್ಣಲೀಲಾ', 'ದಾನಶೂರ ಕರ್ಣ', 'ಗುಲೇಬಕಾವಲಿ', 'ಮಕ್ಮಲ್‌ಟೋಪಿ', 'ದೇವದಾಸಿ', 'ಸಂಪೂರ್ಣ ರಾಮಾಯಣ' ಮುಂತಾದ ನಾಟಕಗಳನ್ನಾಡಲು ಆರಂಭಿಸಿದರು. ಸ್ತ್ರೀನಾಟಕ ಮಂಡಳಿಗೆ ಲಾಭ ಬಂತು. ಹೆಸರೂ ಮತ್ತಷ್ಟು ವ್ಯಾಪಿಸಿತು.

ವಾದ್ಯಗಳ ಮೇಲೆ ಪರಿಣತಿ ಸಾಧಿಸಿ ವಿದ್ವತ್ ಪರೀಕ್ಷೆಗಳನ್ನು ಮಾಡಿಕೊಂಡಿದ್ದ ಪರಮಶಿವನ್‌ಗೆ ರಂಗಸಂಗೀತ ಶಿಕ್ಷಕ ಕೆಲಸ ಸಿಕ್ಕಿತು. ನಾಟಕ ಹಾಗೂ ಶಿಕ್ಷಕ ಎರಡೂ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿದರು.

1927ರಲ್ಲಿ ಬೆಂಗಳೂರಿಗೆ ವರ್ಗವಾಯಿತು. ಸಂಗೀತದ ಎಲ್ಲ ಕಲೆಗಳನ್ನು ಪ್ರದರ್ಶಿಸುವ ವಿಪುಲ ಅವಕಾಶವೇ ಮಹಾನಗರದಲ್ಲಿ ದೊರೆಯಿತು. 'ವೈದೇಹಿ ವಿವಾಹ' ನೃತ್ಯರೂಪಕ ನಿರ್ಮಿಸಿದರು. 'ದೇವದಾಸಿ' ಸಿನಿಮಾದಲ್ಲಿ ಜಿ.ಕೆ.ವೆಂಕಟೇಶ್‌ಗೆ ಸಹಾಯಕ ಸಂಗೀತ ನಿರ್ದೇಶಕನಾಗಿ ದುಡಿದರು. ಕಣಗಾಲ್ ಪ್ರಭಾಕರಶಾಸ್ತ್ರಿಯವರ 'ಬೆಟ್ಟದಗೌರಿ' ಸಿನಿಮಾದಲ್ಲಿ ಸಂಗೀತ ನಿರ್ದೇಶನದ ಅವಕಾಶ ಲಭಿಸಿತು. 1973ರ ನಂತರ ಭರತನಾಟ್ಯ ನೃತ್ಯರೂಪಕಗಳಿಗೆ ಸಂಗೀತ ಸಂಯೋಜನೆ ಮಾಡುವ ಅವಕಾಶಗಳು ಸಾಲುಗಟ್ಟಿದವು. ಕಾಡು ಕುಣಿಯಿತು, ಸಮುದ್ರಮಥನ, ಸಂಗೊಳ್ಳಿ ರಾಯಣ್ಣ, ಕುಮಾರವ್ಯಾಸ, ಬಾಹುಬಲಿ, ಶಾಕುಂತಲ, ಅಲ್ಲಮಪ್ರಭು, ಬಸವೇಶ್ವರ ರೂಪಕಗಳಿಗೆ ರಾಗಸಂಯೋಜನೆ ಮಾಡಿದರು.

ಸಾ.ಶಿ.ಮರುಳಯ್ಯನವರ 'ಚೆಲುವ ಕನ್ನಡ ನಾಡು' ರೂಪಕಕ್ಕೆ ಮಾಡಿದ ರಾಗಸಂಯೋಜನೆ ಉಷಾ ದಾತಾರ್ ನಿರ್ದೇಶನದಲ್ಲಿ ರಾಜ್ಯದಲ್ಲಿ ಮನೆಮಾತಾಯಿತು. ಬೆಳ್ಳಿಬಟ್ಟಲು ರಾಮಚಂದ್ರರಾವ್ ಅವರ ಬುದ್ಧ ಆಮ್ರಪಾಲಿ ರೂಪಕಕ್ಕೆ ಹಿಂದೂಸ್ತಾನಿ ಧಾಟಿಯ ರಾಗಸಂಯೋಜನೆ ಮಾಡಿದರು. ಏಸುಕ್ರಿಸ್ತ ರೂಪಕಕ್ಕೆ ಪಾಶ್ಚಾತ್ಯ ಧಾಟಿಯಲ್ಲಿ ರಾಗಸಂಯೋಜಿಸಿದರು. ದೆಹಲಿಯ ಎನ್‌ಸಿಇಆರ್‌ಟಿ ರಾಷ್ಟ್ರೀಯ ಭಾವೈಕ್ಯ ಗೀತೆಗಳಿಗೆ ಹಾರ್ಮೋನಿಯಂ ನುಡಿಸಿದರು. ಪ್ರಧಾನಿ ರಾಜೀವಗಾಂಧಿ ಅವರು ಭಾಗವಹಿಸಿದ್ದ ಎನ್‌ಸಿಇಆರ್‌ಟಿ ಕಾರ್ಯಕ್ರಮದಲ್ಲಿ ಸಂಗೀತ ಸಾಥ್‌ಗೆ ಮೆಚ್ಚುಗೆ ಪಡೆದರು. 1977ರಲ್ಲಿ ಸಂಗೀತದ ಇನ್ನೊಂದು ಪ್ರಕಾರ ಗಮಕಕಲೆ ಒಲಿಸಿಕೊಂಡರು.

ರಂಗಗೀತೆ ಪ್ರಕಾರಕ್ಕೆ ನೀಡಿದ ಕೊಡುಗೆಗೆ ಪರಮಶಿವನ್ ಅವರಿಗೆ ಗುಬ್ಬಿ ವೀರಣ್ಣ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ, ಕರ್ನಾಟಕ ನಾಟಕ ಅಕಾಡೆಮಿ, ವರದರಾಜು ರಾಜಕುಮಾರ್ ಪ್ರಶಸ್ತಿ, ಕರ್ನಾಟಕ ರಂಗಸಂಗೀತ ಪರಿಷತ್ತಿನ ಸಮ್ಮೇಳನಾಧ್ಯಕ್ಷ ಗೌರವ ಮುಂತಾದ ಪ್ರಶಸ್ತಿಗಳು ಲಭಿಸಿವೆ. ಎ.ವಿ. ಸೂರ್ಯನಾರಾಯಣಸ್ವಾಮಿ ಪ್ರಧಾನ ಸಂಪಾದಕತ್ವದಲ್ಲಿ 'ರಂಗಗೀತಾರತ್ನ' ಅಭಿನಂದನಾಗ್ರಂಥ ಪ್ರಕಟವಾಗಿದೆ. ಬಿ.ಜಯಶ್ರೀ, ಆನಂದರಾಜು ಅವರು 'ಅಗ್ರಜ' ಕ್ಯಾಸೆಟ್ ಹೊರತಂದಿದ್ದಾರೆ. ಪತ್ನಿ ಜಯಲಕ್ಷ್ಮಿ, ಪುತ್ರಿ ಸ್ಮಿತಾ ಅಮೆರಿಕದಲ್ಲಿದ್ದಾರೆ. ಎಂಜಿನಿಯರ್ ಆಗಿರುವ ಪುತ್ರ ದೀಪಕ್ ಹಲವು ವಾದ್ಯಗಳಲ್ಲಿ ಪರಿಣತರು.

ಪ್ರತಿಕ್ರಿಯಿಸಿ: feedback@sudha.co.in